# “ತಾರಾಮಂಡಲ ವೀಕ್ಷಣೆ”

## ಖಗೋಳ ವಿಜ್ಞಾನ ಕಾರ್ಯಕ್ರಮ

**ದಿನಾಂಕ:** 23.11.2023 ರಂದು **ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ, ಬಾಗಲಕೋಟೆ** ಹಾಗೂ **ಶಂಕ್ರಪ್ಪ ಸಕ್ರಿ ಪ್ರೌಢಶಾಲೆ (ಅನುದಾನಿತ), ಬಾಗಲಕೋಟೆ** ಇವರ ಸಂಯುಕ್ತ ಆಶ್ರಯದಲ್ಲಿ **“ತಾರಾಮಂಡಲ ವೀಕ್ಷಣೆ”** ಎಂಬ ಖಗೋಳ ವಿಜ್ಞಾನ ಕಾರ್ಯಕ್ರಮವನ್ನು ಆಯೋಜಿಸಲಾಯಿತು, ಈ ಕಾರ್ಯಕ್ರಮದಲ್ಲಿ **ಶಂಕ್ರಪ್ಪ ಸಕ್ರಿ ಪ್ರೌಢಶಾಲೆ** (ಅನುದಾನಿತ), ಬಾಗಲಕೋಟೆಯ **ಒಟ್ಟು** 55 ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಭಾಗವಹಿಸಿದ್ದರು.

ಕಾರ್ಯಕ್ರಮದ ಉದ್ಘಾಟಕರಾಗಿ ಆಗಮಿಸಿದ್ದ **ಡಾ.ಟಿ.ಬಿ.ಅಳ್ಳೊಳ್ಳಿ,** ಕುಲಸಚಿವರು,ತೋ.ವಿ.ವಿ ಹಾಗೂ ಸದಸ್ಯ ಕಾರ್ಯದರ್ಶಿಗಳು, ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ, ಬಾಗಲಕೋಟೆ ಮತ್ತು ಇತರ ಗಣ್ಯರು **ಸಸಿಗೆ ನೀರುಣಿಸುವ** ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಮುಂದುವರೆದು, ಉದ್ಘಾಟಕರ ಭಾಷಣ ಮಾಡಿದ **ಡಾ.ಟಿ.ಬಿ.ಅಳ್ಳೊಳ್ಳಿ,** ಕುಲಸಚಿವರು,ತೋ.ವಿ.ವಿ ಹಾಗೂ ಸದಸ್ಯ ಕಾರ್ಯದರ್ಶಿಗಳು, ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ, ಬಾಗಲಕೋಟೆ ರವರು ವಿದ್ಯಾರ್ಥಿಗಳು ಮೂಢನಂಬಿಕೆಗಳನ್ನು ನಂಬದೆ ವಿಜ್ಞಾನದ ಕಡೆ ಹೆಚ್ಚಿನ ಒಲವನ್ನು ನೀಡಬೇಕೆಂದು ಕರೆನೀಡಿದರು, ಅದರಂತೆ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರದ ಸದುಪಯೋಗವನ್ನು ಪಡೆದುಕೊಂಡು ವೈಜ್ಞಾನಿಕ ಮನೋಭಾವನೆ ಹೆಚ್ಚಿಸಕೊಳ್ಳುವಂತೆ ಕರೆ ನೀಡಿದರು.

ಅದರಂತೆ, ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಆಗಮಿಸಿದ **ಡಾ. ವಸಂತ ಗಾಣಿಗೇರ,** ಪ್ರಾಧ್ಯಾಪಕರು, ತೋ.ವಿ.ವಿ. ಹಾಗೂ ಸದಸ್ಯರು ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ, ಬಾಗಲಕೋಟೆರವರು ಮಾತನಾಡಿ ಪ್ರಸ್ತುತ ಕಾಲಮಾಣದಲ್ಲಿ ಖಗೋಳ ವಿಜ್ಞಾನ ಕ್ಷೇತ್ರದಲ್ಲಿನ ಬೆಳವಣಿಗೆಗಳ ಮಾಹಿತಿಯನ್ನು ವಿದ್ಯಾರ್ಥಿಗಳಿಗೆ ತಿಳಿಸುತ್ತ, ವಿಜ್ಞಾನದ ಮೇಲೆ ಹೆಚ್ಚಿನ ಒಲವನ್ನು ಬೆಳೆಸಿಕೊಳ್ಳುವಂತೆ ಕರೆ ನೀಡಿದರು.

ಮುಂದುವರೆದು, ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದ **ಶ್ರೀ ವಿಜಯಕುಮಾರ ಕೆ.** ವಿಜ್ಞಾನ ಶಿಕ್ಷಕರು, **ಶಂಕ್ರಪ್ಪ ಸಕ್ರಿ ಪ್ರೌಢಶಾಲೆ** (ಅನುದಾನಿತ), ಬಾಗಲಕೋಟೆರವರು ಮಾತನಾಡಿ , ಖಗೋಳ ವಿಜ್ಞಾನಕ್ಕೆ ಸಂಬಂಧಿಸಿದಂತೆ ವಿವಿಧ ಆಕಾಶ ಕಾಯಗಳು, ನಕ್ಷತ್ರ ಪುಂಜಗಳು ಹಾಗೂ ಇನ್ನುಳಿದ ಖಗೋಳ ವಿಜ್ಞಾನದ ರಹಸ್ಯಕರ ಮಾಹಿತಿಗಳನ್ನು ವಿವರವಾಗಿ ತಿಳಿಸಿದರು ಹಾಗೂ ಸದರಿ ಕಾರ್ಯಕ್ರಮಕ್ಕಾಗಿ ತಮ್ಮ ಶಾಲೆಯನ್ನು ಆಯ್ಕೆಮಾಡಿಕೊಂಡಿದ್ದಕ್ಕಾಗಿ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ, ಬಾಗಲಕೋಟೆಯ ಎಲ್ಲ ಸಿಬ್ಬಂದಿಗಳಿಗೆ ಕೃತಜ್ಞತೆಯನ್ನು ಸಲ್ಲಿಸಿದರು.

ಕಾರ್ಯಕ್ರಮದ ಭಾಗವಾಗಿ, ವಿದ್ಯಾರ್ಥಿಗಳಿಗೆ ದೂರದರ್ಶಕದ (Telescope) ಮಾಹಿತಿ ಹಾಗೂ ಕೆಲ ನಕ್ಷತ್ರ ಪುಂಜಗಳ ಮಾಹಿತಿಯನ್ನು ತಿಳಿಸಲಾಯಿತು.

ಸದರಿ ಕಾರ್ಯಕ್ರಮವನ್ನು, **ಶ್ರೀ ಈರಣ್ಣ ಬುಳ್ಳಾ,** ಕ್ಯೂರೇಟರ್,ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ, ಬಾಗಲಕೋಟೆ ರವರು ನಿರೂಪಿಸಿದರು ಹಾಗೂ **ಶ್ರೀ ಆಸೀಫ ಬಾಗವಾನ, ತಾಂತ್ರಿಕ ಸಹಾಯಕರು,** ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ, ಬಾಗಲಕೋಟೆ ರವರು ವಂದಿಸಿದರು.

ಮುಂದುವರೆದು, ಕಾರ್ಯಕ್ರಮದಲ್ಲಿ **ಶ್ರೀ ಗಂಗನಗೌಡ ಪಾಟೀಲ** ಸಹಾಯಕರು, ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ, ಬಾಗಲಕೋಟೆ ಹಾಗೂ **ಶಂಕ್ರಪ್ಪ ಸಕ್ರಿ ಪ್ರೌಢಶಾಲೆ** (ಅನುದಾನಿತ), ಬಾಗಲಕೋಟೆಯ ಸಿಬ್ಬಂದಿಗಳು ಉಪಸ್ಥಿತರಿದ್ದರು.


"ತಾರಾಮಂಡಲ ವೀಕ್ಷಣೆ"








SRSC/BGK/01/01/2020-21
Science and Technology Promotion


SRSC/BGK/01/01/2020-21
Science and Technology Promotion


SRSC/BGK/01/01/2020-21
Science and Technology Promotion










***********